	ಜಕಾತಿ	ಮೋಟಾರು ವಾಹನ	ಅಭಿವೃದ್ಧಿ ಅನುದಾನ
96-97	955792250	33420000	-
	420331750	47580000	25000000
97-98	ರಾಜ್ಯದ ಹಣಕಾಸು ಆಯೋಗದ ಅಡಿಯಲ್ಲಿ ಅಯವ್ಯಯದಲ್ಲಿ ಕಲ್ಪಿಸಲಾದ ಅನುದಾನ ಮಹಾನಗರಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಮೊತ್ತ ಈ ಕೆಳಗಿನಂತಿದೆ.		
ಮಹಾನಗರ ಪಾಲಿಕೆಗಳು	143, 26, 80, 168		
ನಗರ/ಪುರ/ಪ.ಪಂಚಾಯ್ತಿ	125,78,61,834		

ಆ) 1997-98ರಲ್ಲಿ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅಯವ್ಯಯದಲ್ಲಿ ಕಲ್ಪಿಸಲಾದ ಅನುದಾನದ ಮೊತ್ತದಲ್ಲಿ ಮಹಾನಗರಪಾಲಿಕೆಗಳು ಕಳೆದ ವರ್ಷ ಪಡೆಯುತ್ತಿದ್ದ ಅನುದಾನ ಮುಂದುವರೆದು ಇದಕ್ಕೆ ಎಸ್‌ಎಫ್‌ಸಿ ವೇಟೇಜ್‌ನ ಪ್ರಕಾರ ಬರುವ ಅನುದಾನವನ್ನು ಸೇರಿಸಿ ಮಹಾನಗರಪಾಲಿಕೆಗಳಿಗೆ ಪಾಲನ್ನು ನಿರ್ಧರಿಸಿ ಅದರಂತೆ ಅನುದಾನ ಬಿಡುಗಡೆ ಮಾಡಲಾಗಿದೆ. ಇತರ ಸ್ಥಳೀಯ ಸಂಸ್ಥೆಗಳಿಗೆ ಅಲ್ಲಿನ ಪೌರ ಸೇವಾ ವೃಂದದ ನೌಕರರ ವೇತನ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸ್ಥಳೀಯ ಸಂಸ್ಥೆಗಳ ಪರವಾಗಿ ನೀಡಬೇಕಾದ ಸಾಲದ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪುಸ್ತಾಪಿಸಲಾದ ವಿಷಯಗಳು

ಬೆಳೆನಾಶವಾಗಿರುವ ಬಗ್ಗೆ ಜಂಟಿ ಸದನ ಸಮಿತಿ ಅವಧಿ ವಿಸ್ತರಣೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೆಳೆ ನಾಶ ಆಗಿರುವ ಬಗ್ಗೆ ಅದನ್ನು ಪರಿಶೀಲಿಸಿ ವರದಿ ಕೊಡಲು ಜಂಟಿ ಸದನ ಸಮಿತಿಯನ್ನು ನಾವು ರಚನೆ ಮಾಡಿದ್ದೆವು. ಆ ಜಂಟಿ ಸದನ ಸಮಿತಿಯ ಅಧ್ಯಕ್ಷರು ನಮಗೂ ಒಂದು ಪತ್ರವನ್ನು ಬರೆದಿದ್ದಾರೆ. ಜಂಟಿ ಸದನ ಸಮಿತಿಯ ವರದಿಯನ್ನು ಈ ಸದನಕ್ಕೆ ಸಲ್ಲಿಸುವುದಕ್ಕೋಸ್ಕರವಾಗಿ ಮೇ ತಿಂಗಳ 11ನೇ ತಾರೀಖಿನವರೆಗೆ ಸಮಯವನ್ನು ವಿಸ್ತರಣೆ ಮಾಡಬೇಕೆಂದು ಆ ಪತ್ರದಲ್ಲಿ ಕೇಳಿದ್ದಾರೆ. ಬಹುಶಃ ಅದನ್ನು ಈ ಸದನ ಒಪ್ಪುವುದಾದರೆ ಮಾಡಬಹುದು.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಬಹಳ ತುರ್ತಾಗಿದೆಯೆಂದು ತಿಳಿದುಕೊಂಡೇ ಸದನಸಮಿತಿಯನ್ನು ರಚಿಸಬೇಕೆಂದು

ನಾವು ಸರ್ಕಾರಕ್ಕೆ ಕೇಳಿಕೊಂಡಿದ್ದೆವು. ಏಕೆಂದರೆ ಅಲ್ಲಿಗೆ ಬೇಗನೆ ಹೋಗಿ ಪರಿಹಾರ ಕೊಡತಕ್ಕಂಥ ಪುರುಸೊತ್ತು ಸರ್ಕಾರಕ್ಕೂ ಇಲ್ಲ. ಮತ್ತು ಅವರ ಹತ್ತಿರ ಹಣ ಇಲ್ಲ ಅಂದಾಗ ನ್ಯಾಚುರಲ್ ಆಗಿ ಈ ಸದನಸಮಿತಿ ಹೋಗಿ ನೋಡಿಕೊಂಡು ಬಂದಮೇಲೆ ಮನವರಿಕೆಯಾಗಿ, ಅದಕ್ಕೆ ಸರ್ಕಾರ ಸ್ಪಂದಿಸಿ ಸಹಾಯ ಮಾಡುತ್ತದೆ ಎನ್ನುವ ದೃಷ್ಟಿಯಿಂದ ಇಲ್ಲಿ ಒಪ್ಪಿಗೆ ಆಗಿ ಸದನಸಮಿತಿಯನ್ನು ಕಳುಹಿಸಿದ್ದೆವು. ಆದರೆ ಈಗ ಅದನ್ನು 15ನೇ ತಾರೀಖಿನ ವರೆಗೆ ಎಕ್ಸ್‌ಟೆಂಡ್ ಮಾಡುವುದಕ್ಕೆ ಹೋದರೆ ಏನಾಗುತ್ತದೆ ಎಂದರೆ. ವಿಳಂಬವಾಗಿ ರೈತರಿಗೆ ತೊಂದರೆಯಾಗುತ್ತದೆ.

ಉಪಾಧ್ಯಕ್ಷರು : ಈ ಸದನಸಮಿತಿಯು ವರದಿ ಕೊಡುವುದಕ್ಕೆ ಸಮಯವನ್ನು ವಿಸ್ತರಣೆ ಮಾಡಲು ಸರ್ಕಾರ ಕೇಳಲಿಲ್ಲ. ಸಮಿತಿಯವರು ಸಮಯ ಎಕ್ಸ್‌ಟೆಂಡ್ ಮಾಡುವುದಕ್ಕೆ ಕೇಳಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಜಂಟಿ ಸದನ ಸಮಿತಿಯ ಅಧ್ಯಕ್ಷರು ಪತ್ರ ಬರೆದು 'ಈ ವರದಿಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಸಮಯ ಬೇಕು' ಎಂದು ಕೇಳಿದ್ದಾರೆ. ಸಮಯ ವಿಸ್ತರಣೆ ಮಾಡಬೇಕೆಂದು ಸರ್ಕಾರ ಕೇಳಲಿಲ್ಲ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಆಯಿತು. ಇದು ಬಹಳ ಗಂಭೀರವಾದಂಥ ಸಮಸ್ಯೆ. ಈ ವಿಷಯವನ್ನು ನಿನ್ನೆಯ ದಿವಸವೇ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಈ ವಿಷಯವನ್ನು ಚರ್ಚೆಗೆ ಏಕೆ ತೆಗೆದುಕೊಂಡಿಲ್ಲವೆಂದರೆ ನಾವು ಎಲ್ಲರೂ ಒಪ್ಪಿ ಸದನಸಮಿತಿ ಮಾಡಿ ಅದರಲ್ಲಿ ಎಲ್ಲಾ ಪಕ್ಷದ ಸದಸ್ಯರು ಇದ್ದ ಕಾರಣಕ್ಕಾಗಿ ಇವತ್ತೇ ಚರ್ಚೆಗೆ ಇನ್ಸಿಸ್ಟ್ ಮಾಡಬಾರದು ಎನ್ನತಕ್ಕಂಥ ಕಾರಣದಿಂದಲೇ ನಾವು ನಿನ್ನೆಯ ದಿವಸ ಬೇರೆ ವಿಷಯವನ್ನು ಪ್ರಸ್ತಾಪ ಮಾಡಿದೆವು. ಕನಿಷ್ಟ ಪಕ್ಷ 2 ದಿವಸದಲ್ಲಾದರೂ ಸದನಸಮಿತಿಯವರು ಇಂಟರೀಮ್ ರಿಪೋರ್ಟ್ ಕೊಡದೇ ಹೋದರೆ ಆ ರೈತರಿಗೆ ಯಾವುದೇ ಪರಿಹಾರ ಕೂಡ ಸಿಗುವುದಿಲ್ಲ. ಆದ್ದರಿಂದ, ಒಂದು ಇಂಟರೀಮ್ ರಿಪೋರ್ಟ್ ಕೊಟ್ಟು ತಾತ್ಕಾಲಿಕ ಪರಿಹಾರ ಕೊಟ್ಟರೆ ಅದಕ್ಕೆ ಒಂದು ಅರ್ಥ ಇರುತ್ತದೆ. ಇಲ್ಲದಿದ್ದರೆ ಇಡೀ ಸದನ ಒಂದು ಕಮಿಟಿಯನ್ನು ಕಾನ್ಸಿಟ್ಯೂಟ್ ಮಾಡಿ ಬೇಗನೆ ರಿಪೋರ್ಟ್ ಕೊಡದೇ ಹೋದರೆ ಅದಕ್ಕೆ ಯಾವ ಮಹತ್ವ ಕೂಡ ಇರುವುದಿಲ್ಲ. ಮತ್ತು ಆ ವಿಷಯವನ್ನು ಪ್ರಸ್ತಾಪ ಮಾಡಿದರೂ ಕೂಡ ಅದು ಪ್ರಯೋಜನಕ್ಕೆ ಬರುವುದಿಲ್ಲ. ಈಗ ಜಂಟಿಸದನ ಸಮಿತಿ ಹೋಗಿ ಏನು ಭೇಟಿ ಮಾಡಿ ಬಂದಿದ್ದಾರೆ ಅದರ ಆಧಾರದ ಮೇಲೆ ಇವತ್ತು ಅಥವಾ ನಾಳೆ ಒಂದು ಮಧ್ಯಂತರ ವರದಿ ಕೊಡಲಿ, ಅದು ಆದ ಮೇಲೆ ಬೇಕಾದರೆ 8-10 ದಿವಸದಲ್ಲಿ ಫೈನಲ್ ರಿಪೋರ್ಟನ್ನು ಸರ್ಕಾರಕ್ಕೆ ಕೊಡಲಿ. ಈ ರೀತಿ ಸದನಸಮಿತಿ ಮಾಡದಿದ್ದರೆ ಆ ವಿಷಯದ ಮಹತ್ವ ಹೊರಟುಹೋಗುತ್ತದೆ ಮತ್ತು ಇಡೀ ಸದನ ಆ ವಿಷಯದ ಬಗ್ಗೆ ಏನು ಗಮನ ಹರಿಸಿದ್ದೆವು ಅದರ ಪಾವಿತ್ರ್ಯತೆ ಕೂಡ ಉಳಿಯುವುದಿಲ್ಲ. ಈಗಾಗಲೇ ಪ್ರತಿದಿನ ರಾಯಚೂರು, ಗುಲ್ಬರ್ಗಾ, ಬೆಳಗಾಂ, ಗದಗ್, ಮುಂತಾದ ಕಡೆಯಲ್ಲಿ ಬೆಳೆ ನಾಶದಿಂದ ಆದ ಆತ್ಮಹತ್ಯೆ ಬಗ್ಗೆ ವರದಿಗಳು ಬರುತ್ತಿವೆ. ಅದಕ್ಕೋಸ್ಕರ ಇದನ್ನು ತಡೆಗಟ್ಟಲು ಏನಾದರೂ ಪರಿಹಾರ ಕಂಡುಹಿಡಿಯಬೇಕು. ಮತ್ತು ಇದರಲ್ಲಿ ಯಾರೂ ಸಹ ರಾಜಕೀಯ ಮಾಡಬೇಕಾದ ಅವಶ್ಯಕತೆ ಇಲ್ಲ. ಮತ್ತು ಅದು ಸರಿಯಲ್ಲ. ಇಂಥ ಸಮಸ್ಯೆ ಬಂದಾಗ ಯಾವ ರೀತಿಯಾಗಿ ಬಗೆಹರಿಸಬೇಕು

ಎನ್ನುವಂಥದ್ದಕ್ಕೆ ನಾವು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಇದು ಒಂದು ದಿವಸದ ಸಮಸ್ಯೆ ಅಲ್ಲ. ಇದು ಕಂಟಿನ್ಯೂ ಇರಬಹುದು. ಮುಂದಿನ ವರ್ಷವೂ ಇದೇ ರೀತಿ ಆಗುತ್ತದೆ ಎಂದಾಗ ಇದಕ್ಕೆ ಎಲ್ಲರೂ ಇದೇ ರೀತಿಯ ದೃಷ್ಟಿಕೋನದಿಂದ ನೋಡಿದರೆ ಹೇಗೆ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ದಯಮಾಡಿ ಆದಷ್ಟು ಬೇಗ ರಿಪೋರ್ಟನ್ನು ಕೊಡಬೇಕು, ಇಂಟರಿಂ ರಿಪೋರ್ಟನ್ನು ಆದರೂ ಕೊಟ್ಟರೆ ಪರಿಹಾರ ಏನು ಕೊಡಬೇಕು ಅಥವಾ ಯಾವುದನ್ನು ಸಜೆಸ್ಟ್ ಮಾಡುತ್ತಾರೆ ಎನ್ನುವಂಥದ್ದು ಎಲ್ಲರಿಗೂ ಕೂಡ ಗೊತ್ತಾಗುತ್ತದೆ. ಅದರ ಮೇಲೆ ನಾವು ಚರ್ಚೆ ಮಾಡಬಹುದು. ನಂತರ ಫೈನಲ್ ರಿಪೋರ್ಟ್ ಬಂದಮೇಲೆ ಬೇಕಾದರೆ ಇನ್ನೊಂದು ಸಲ ಚರ್ಚೆ ಕೂಡ ಮಾಡಬಹುದು. ಆದ್ದರಿಂದ ದಯವಿಟ್ಟು ಬೇಗನೆ ಆ ರಿಪೋರ್ಟನ್ನು ಸದನಕ್ಕೆ ಒದಗಿಸಿಕೊಡಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಮಹತ್ವ ಏನು ಎನ್ನುವುದು ಈ ಸದನದಲ್ಲಿ ಚರ್ಚೆಯಾದ ರೀತಿಯಿಂದಲೇ ಗೊತ್ತಾಗುತ್ತದೆ. ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆ ನಾಶದಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿರುವಂಥದ್ದರ ಬಗ್ಗೆ ಈ ಸದನದಲ್ಲಿ ಸುದೀರ್ಘವಾಗಿ ಚರ್ಚೆ ಆದಮೇಲೆ ಅಲ್ಲಿಂದ ತಕ್ಷಣ ವರದಿ ತರಬೇಕೆನ್ನುವ ಉದ್ದೇಶದಿಂದ ತರಾತುರಿಯಲ್ಲಿ ಸದನಸಮಿತಿಯನ್ನು ಮಾಡಿರುವುದಾಗಿದೆ. ಸದನಸಮಿತಿ ಬೇಗ ವರದಿಯನ್ನು ಕೊಡುತ್ತದೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ನೀಡಿದ್ದಾರೆ. ಬಹಳ ದಿನಗಳ ಕಾಲ ವರದಿಯನ್ನು ಕೊಡದೆ ಮುಂದೂಡುವಂಥದ್ದು ಸರಿಯಲ್ಲ. ವರದಿಯನ್ನು ತಕ್ಷಣ ಕೊಡಬೇಕು ಎನ್ನುವಂಥದ್ದು ಸದನದ ಒಟ್ಟಾರೆ ಅಭಿಪ್ರಾಯವಾಗಿದೆ. ಆದ್ದರಿಂದ ಈ ಅಧಿವೇಶನ ಮುಗಿಯುವುದರೊಳಗಾಗಿ ವರದಿ ಕೊಡುತ್ತೇವೆಂದು ಹೇಳಿದರೆ ಆ ವಿಷಯದ ಮಹತ್ವ ಕಡಿಮೆಯಾಗುತ್ತದೆ. ಆದ್ದರಿಂದ ತಾತ್ಕಾಲಿಕವಾದ ವರದಿಯನ್ನು ತಕ್ಷಣವೇ ಕೊಡಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಸದನಸಮಿತಿಯ ಅಧ್ಯಕ್ಷರಿಗೆ ಮನವಿ ಮಾಡುತ್ತಿದ್ದೇನೆ. ಸದನದ ಸಮಿತಿಯ ಸದಸ್ಯರು ಅಲ್ಲಿಗೆ ಹೋಗಿ ಬೆಳೆ ನಾಶದ ಸ್ಥಳವನ್ನು ನೋಡಿದ್ದಾರೆ, ಅವರ ಮೊದಲನೆ ನೋಟದಲ್ಲಿ ಏನೇನು ಕಂಡಿದ್ದಾರೆ ಆ ಮೊದಲನೇ ನೋಟದ ವರದಿಯನ್ನು ಸರ್ಕಾರಕ್ಕೆ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ ಎನ್ನುವ ಮಾತಿನ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಸದನಸಮಿತಿಯಲ್ಲಿ ಎಲ್ಲಾ ಪಕ್ಷದ ಸದಸ್ಯರು ಇದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರ ಹೇಳಿಕೆಯನ್ನು ತಿದ್ದುವ ದೃಷ್ಟಿಯಿಂದ ಮತ್ತು ರೆಕಾರ್ಡ್‌ನಲ್ಲಿ ಸರಿಯಾಗಿ ರೆಕಾರ್ಡ್ ಆಗುವ ದೃಷ್ಟಿಯಿಂದ ಚಿಕ್ಕ ಕರೆಕ್ಷನ್ ಮಾಡುತ್ತಿದ್ದೇನೆ. ಜಂಟಿ ಸದನಸಮಿತಿಯಲ್ಲಿ ಎಲ್ಲಾ ಪಕ್ಷದ ಸದಸ್ಯರು ಇಲ್ಲ. ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ - ಈ ಜಂಟಿ ಸದನಸಮಿತಿ ಮಾಡಿದ ಮೇಲೆ 15 ದಿವಸಗಳೊಳಗಾಗಿ ನಿರ್ದಿಷ್ಟವಾದಂಥ ಮಧ್ಯಂತರ ವರದಿಯನ್ನು ಕೊಡಬೇಕು. ಎಂದು ಈ ಸದನದಲ್ಲಿ ಬಂದಂಥ ಒಟ್ಟಾಭಿಪ್ರಾಯವಾಗಿರುತ್ತದೆ. ಈಗಾಗಲೇ 15 ದಿವಸ ಕಳೆದಿದೆ. ಮತ್ತು ಈಗಾಲೇ (ಒಂದು ತಂಡ ಬೀದರ್ ಜಿಲ್ಲೆಗೆ ಹೋಗಿ ಬಂದಿದೆ. ಅವರು ಮೇಲುನೋಟಕ್ಕೆ ಏನನ್ನು

ನೋಡಿದ್ದಾರೆ ಅದನ್ನು ತಕ್ಷಣ ವರದಿ ಮಾಡಬೇಕು. ರೈತರಿಗೆ ಪರಿಹಾರವನ್ನು ಆದಷ್ಟು ಬೇಗ ಕೊಡಬೇಕಾಗಿರುವುದರಿಂದ ಮಧ್ಯಂತರ ವರದಿಯನ್ನು ಬೇಗನೆ ಕೊಡಬೇಕೆಂದು ಹೇಳುತ್ತಿದ್ದೇವೆ. ಇಲ್ಲಿ ಸರ್ಕಾರ ಏನು ಅಭಿಪ್ರಾಯಕ್ಕೆ ಬಂದಿದೆಯೆಂದರೆ - 'ಸದನ ಸಮಿತಿ ಪೂರ್ತಿಯಾದ ವರದಿಯನ್ನು ಮಂಡಿಸುವವರೆಗೆ ನಾವು ಪರಿಹಾರ ಕೊಡುವುದಿಲ್ಲ, ಅದರ ಪೂರ್ವಾಪರಗಳನ್ನು ನೋಡದೆ ನಾವು ಪರಿಹಾರವನ್ನು ನಿಗದಿ ಮಾಡಲಿಕ್ಕೆ ಬರುವುದಿಲ್ಲ' ಎಂದು ಹೇಳುತ್ತಿದ್ದಾರೆ. ಆದರೆ ಆ ರೈತರಿಗೆ ತಕ್ಷಣ ಪರಿಹಾರಕೊಡಬೇಕೆನ್ನುವುದು ಈ ಸದನದ ಒತ್ತಾಯವಾಗಿತ್ತು. ಅದಕ್ಕೋಸ್ಕರ 15 ದಿವಸದ ಒಳಗಾಗಿ ಇಂಟರಿಂ ರಿಪೋರ್ಟ್ ಕೊಟ್ಟರೆ ಅವರಿಗೆ ಪರಿಹಾರ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಪರಿಹಾರ ಕೊಡುವುದನ್ನು ತಪ್ಪಿಸಲಿಕ್ಕೆ ಸರ್ಕಾರ ಈಗ 'ಪೂರ್ತಿ ವರದಿ ಬರಲಿ ಎಂದು' ಹೇಳತಕ್ಕಂಥದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಏನು ಒಂದು ಆತ್ಮಹತ್ಯೆ ನಡೆಯುತ್ತಿತ್ತು ಆ ದುರಂತ ಇನ್ನಷ್ಟೂ ಮುಂದುವರಿಯಬಾರದು ಎನ್ನುವ ಕಾರಣದಿಂದ ಬಹಳ ತುರ್ತಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಸಹಾಯವಾಗಲಿ ಎಂದು ಒಂದು ಸಮಿತಿಯನ್ನು ರಚಿಸಿತ್ತು. ಬಹಳ ದುಃಖ ತರುವ ಅಂಶವೆಂದರೆ, ಈ ಜಂಟಿಸದನ ಸಮಿತಿ ಗುಲ್ಬರ್ಗಾದಲ್ಲಿ ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿಯೇ ಅಲ್ಲಿ ಒಂದು ಆತ್ಮಹತ್ಯೆ ಪ್ರಕರಣ ಆಯಿತು. ಈ ಸಮಿತಿ ಈಗಾಗಲೇ ಗುಲ್ಬರ್ಗಾ ಮತ್ತು ಬೀದರ್‌ಗೆ ಭೇಟಿ ಕೊಟ್ಟಿದೆ. ಆ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ಬಿ. ಶಿವಕುಮಾರ್ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದನ್ನು ನಾನು ಓದಿದ್ದೇನೆ. "15ನೇ ತಾರೀಖು ಸದನ ಪ್ರಾರಂಭವಾಗುವ ದಿವಸ ನಾನು ನಮ್ಮ ಸಮಿತಿಯ ಮಧ್ಯಂತರ ವರದಿಯನ್ನು ಈ ಸಭೆಯ ಮುಂದೆ ಮಂಡಿಸುತ್ತೇವೆ" ಎನ್ನುವ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ಈಗ ಇನ್ನಷ್ಟು ಆತ್ಮಹತ್ಯೆಗಳು ಆಗಬಾರದು, ಬೇಗ ಪರಿಹಾರ ಕ್ರಮ ಆಗಬೇಕು, ಸಮಿತಿ ವರದಿ ಕೊಡಲಿ ಎನ್ನುವುದನ್ನು ಸರ್ಕಾರ ರಕ್ಷಣೆ ಮಾಡಿಕೊಂಡು ಆತ್ಮಹತ್ಯೆಗಳು ಮುಂದುವರೆಯುವ ರೀತಿ ಪ್ರೋತ್ಸಾಹ ಕೊಡಬಾರದು ಎನ್ನುವುದಕ್ಕೋಸ್ಕರ ವರದಿಯನ್ನು ಬೇಗ ಸದನದ ಮುಂದೆ ಮಂಡಿಸಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಿ. ಬಿ. ಶಿವಕುಮಾರ್ (ಕೆರಗೋಡು) : ಕಳೆದ ಅಧಿವೇಶನ ಮುಗಿಯುವ ಕೊನೆಯ ಭಾಗದಲ್ಲಿ, ರಾಜ್ಯದಾದ್ಯಂತ ಬೆಳೆಹಾನಿಯಾಗಿ, ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಜಂಟಿ ಸದನ ಸಮಿತಿಯನ್ನು ರಚನೆ ಮಾಡಿದ್ದು ಮಾನ್ಯ ಗೌರವಾನ್ವಿತ ವಿರೋಧ ನಾಯಕರಿಗೆ ಮತ್ತು ಇತರೆ ಸದಸ್ಯರೆಲ್ಲರಿಗೂ ತಿಳಿದಿರುವ ವಿಚಾರ. ನಾವು ಪ್ರಥಮ ಸಭೆಯನ್ನು 3ನೇ ತಾರೀಖು ಇಟ್ಟುಕೊಂಡಿದ್ದೆವು. ಸಮಿತಿಯ ಎಲ್ಲಾ ಸದಸ್ಯರೂ ಸೇರಿ 5 ದಿವಸ ಬಂದ ರಜೆಯನ್ನೂ ಕೂಡ ಉಪಯೋಗಿಸಿಕೊಳ್ಳದೆ, ಆ ಸಮಯದಲ್ಲಿ ಪ್ರವಾಸ ಇಟ್ಟುಕೊಂಡು, ಬೀದರ್ ಮತ್ತು ಗುಲ್ಬರ್ಗಾ ಹಾಗೂ ಹೆಚ್ಚಿಗೆ ಪ್ರಕರಣಗಳಾಗಿರುವ ಎರಡು ಜಿಲ್ಲೆಗಳಿಗೆ ಭೇಟಿ ಕೊಟ್ಟು ಬಂದಿರುವುದು ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಶ್ರೀ ಸುರೇಶ್‌ಕುಮಾರ್‌ರವರು, ನೀವು 15ನೇ ತಾರೀಖು ಸದನ ಪ್ರಾರಂಭವಾಗುತ್ತದೆ, ಆಗ ಮಧ್ಯಂತರ ವರದಿ ಕೊಡುತ್ತೇವೆಂದು ಹೇಳಿದ್ದೀರಿ ಎಂದು

ಹೇಳಿದರು ಅದು ತಪ್ಪು. ನಾನು ಆ ರೀತಿ ಹೇಳಲಿಲ್ಲ. ಸದನ 15ನೇ ತಾರೀಖು ಪ್ರಾರಂಭವಾಗುತ್ತದೆ, ಈ ತಿಂಗಳ ಕೊನೆಯೊಳಗೆ ಅಂದರೆ ಏಪ್ರಿಲ್ ತಿಂಗಳ ಕೊನೆಯೊಳಗೆ ಮಧ್ಯಂತರ ವರದಿ ಕೊಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದು. ಸಮಿತಿಯು ಅಲ್ಲಿಗೆ ಹೋದ ಸಂದರ್ಭದಲ್ಲಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಗೆ ಸದನ ಸಮಿತಿಯು ಪ್ರವಾಸ ಮಾಡುತ್ತಿಲ್ಲವೆಂಬ ಆರ್ಟಿಕಲ್ ಬಂತು. ನಾನು ಗುಲಬರ್ಗಾದಲ್ಲಿ ಈ ಸಮಿತಿಯ ರಚನೆ ಕುರಿತು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದೆ. ಕೋಲಾರದಲ್ಲಿ ರಾಗಿ, ಕಡಲೆಕಾಯಿ ಹೋಗಿದೆ, ಮಧುಗಿರಿಯಲ್ಲಿ ಕಡಲೆಕಾಯಿ ಹೋಗಿದೆ, ಬೆಳ್ತಂಗಡಿಯಲ್ಲಿ ಸುಂಟರಗಾಳಿಯಿಂದ ಅಡಿಕೆ ಮರ ಮುರಿದುಹೋಗಿದ್ದೆಲ್ಲವನ್ನೂ ಪರಿಶೀಲಿಸಲು ಸದನ ಸಮಿತಿ ಮಾಡಬೇಕೆಂಬ ಒತ್ತಾಯ ಬಂದಾಗ, ನಾನು ಅಲ್ಲಿಂದ ಸಮಿತಿಯ ಜೊತೆ ಬಂದು, ಕೃಷಿ ಸಚಿವರನ್ನು ಸಭಾಧ್ಯಕ್ಷರನ್ನು ಭೇಟಿ ಮಾಡಿದೆ. ಈಗಾಗಲೇ ಈ ರೀತಿ ಬಂದಿದೆ. ನಾವು ವರದಿ ಕೊಡಬೇಕೆಂದರೆ, ಕೇವಲ 2 ಜಿಲ್ಲೆಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮಧ್ಯಂತರ ವರದಿ ಕೊಡುವುದೇ ಅಥವಾ ರಾಜ್ಯದಲ್ಲೇನು ಬೆಳೆಹಾನಿಯಾಗಿದೆ ಅಲ್ಲೆಲ್ಲಾ ಸಮಿತಿಯವರು ಭೇಟಿ ನೀಡಿದ ನಂತರ ವರದಿ ಕೊಡಬೇಕೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ತಕ್ಷಣ ಸರ್ಕಾರ ಸ್ಪಂದಿಸಬೇಕೆನ್ನುವ ರೀತಿಯಲ್ಲಿ ರೈತರ ಹಿತದೃಷ್ಟಿಯಿಂದ ಹೇಳುತ್ತಿರುವುದನ್ನು ಸಮಿತಿಯವರೆಲ್ಲರೂ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಆದರೆ, ಬೀದರ್ ಮತ್ತು ಗುಲ್ಬರ್ಗಾಕ್ಕೆ ಹೋಗಿ ಬಂದ ನಂತರ, ಬೇರೆ ಜಿಲ್ಲೆಗಳಲ್ಲಿ ಏನಾಗಿದೆ ಅದನ್ನೂ ಕೂಡ ಸಮಿತಿಯವರು ಪ್ರತ್ಯೇಕವಾಗಿ ನೋಡಿಕೊಂಡು ಬರಲು ತಂಡ ಮಾಡಿಕೊಂಡು ಅಂದರೆ, ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಪುಟ್ಟಣ್ಣಯ್ಯ ಮತ್ತು ಶ್ರೀ ಡಿ. ಆರ್. ಪಾಟೀಲರ ಒಂದು ತಂಡ ಹೋಗಲು ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಬೀದರ್‌ನಲ್ಲಿ 11-12 ಪ್ರಕರಣಗಳಾಗಿವೆ ಎಂದಾಗ, ಅಲ್ಲಿಗೆ ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಪುಟ್ಟಣ್ಣಯ್ಯ, ಶ್ರೀ ಡಿ. ಆರ್. ಪಾಟೀಲರು ಹೋದರು.

ಉಪಾಧ್ಯಕ್ಷರು : ಸಮಯ ಬೇಕೇ ಎಂಬುದರ ಬಗ್ಗೆ ಹೇಳಿ.

ಶ್ರೀ ಜಿ. ಬಿ. ಶಿವಕುಮಾರ್ : ಏಕೆ ಸಮಯ ಬೇಕೆಂದರೆ, ತಪ್ಪಿಸಿಕೊಳ್ಳಲು ಅಲ್ಲ. ನಾವು ಎರಡು ಜಿಲ್ಲೆಗಳನ್ನು ಆಧಾರವಾಗಿಟ್ಟುಕೊಂಡು ಮಧ್ಯಂತರ ವರದಿ ಕೊಟ್ಟಾಗ, ಇಡೀ ರಾಜ್ಯದ ಬೇರೆ ಜಿಲ್ಲೆಗಳಲ್ಲಾಗಿರುವ ಬಗ್ಗೆ ಏನು ಮಾಡುವುದೆಂಬ ಪ್ರತ್ಯೇಕ ವ್ಯಾಖ್ಯಾನ ಬರುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ನಾವು ಎತ್ತಿರುವ ಪ್ರಶ್ನೆ ಬೇರೆ. ಬೀದರ್ ಮತ್ತು ಗುಲಬರ್ಗಾ ಜಿಲ್ಲೆಯಲ್ಲಿ ನಡೆದಿರುವ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಮಧ್ಯಂತರ ವರದಿ, ಇಡೀ ರಾಜ್ಯದ ಮತ್ತು ಒಟ್ಟು ರಿಪೋರ್ಟ್; ಎರಡನ್ನೂ ಸೇರಿಸಿ ಹೇಳುತ್ತಿರುವುದು ಸರಿಯಲ್ಲ. ಬೀದರ್ ಮತ್ತು ಗುಲಬರ್ಗಾ ಬಗ್ಗೆ ತಕ್ಷಣ ಮಧ್ಯಂತರ ವರದಿ ಕೊಡಬೇಕು. ಏಕೆಂದರೆ, ಇದು ಬಹಳ ಪ್ರಮುಖವಾದ ಮತ್ತು ಗಂಭೀರವಾದ ವಿಷಯ.

ಉಪಾಧ್ಯಕ್ಷರು : ಬೇರೆ ಜಿಲ್ಲೆಗಳಲ್ಲಿ ಬೆಳೆ ನಷ್ಟವಾದುದು ಪ್ರಾಮುಖ್ಯವಲ್ಲವೇ? ಅಲ್ಲಿಯ ಜನರು ರೈತರಲ್ಲವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಬೇರೆ ಜಿಲ್ಲೆಯ ವಿಚಾರ ಬೇರೆ. ಆದರೆ, ಬೀದರ್ ಮತ್ತು ಗುಲಬರ್ಗಾಕ್ಕೆ ಸಂಬಂಧಿಸಿದ ಮಧ್ಯಂತರ ವರದಿ ಬೇಕು.

(ಗೊಂದಲ)

ಉಪಾಧ್ಯಕ್ಷರು : ಅವರು ಮಾತು ಮುಗಿಸಲಿ. ಆಮೇಲೆ ನೀವು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಬೀದರ್ ಮತ್ತು ಗುಲಬರ್ಗಾಕ್ಕೆ ಸಂಬಂಧಿಸಿದ್ದನ್ನು ಮಾತ್ರ ಮಧ್ಯಂತರ ವರದಿ ಕೊಡಬೇಕೆಂದು ಹೇಳಿದ್ದು.

ಉಪಾಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರು ಬೇರೆ ರೂಪದ ಉತ್ತರ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುವುದು ಅರ್ಥವಾಯಿತು. ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ ನಂತರ ಈ ವರದಿಯನ್ನು ಈ ಸದನಕ್ಕೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದಾಗುವುದಿಲ್ಲ. ಅದರ ಬಗ್ಗೆ ನಮಗೇನೂ ವಿರೋಧವಿಲ್ಲ. ಆದರೆ, ಗುಲಬರ್ಗಾ ಮತ್ತು ಬೀದರ್‌ನಲ್ಲಿ ನಡೆದಿರುವ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೂಡಲೇ ವರದಿಯನ್ನು ಮಂಡಿಸಬೇಕು.

ಉಪಾಧ್ಯಕ್ಷರು : ಅವರು ಯಾವ ರೀತಿ ಉತ್ತರಿಸಬೇಕು?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಧ್ಯಂತರ ವರದಿಗೂ, ಅಂತಿಮ ವರದಿಗೂ ವ್ಯತ್ಯಾಸವಿದೆ.

ಉಪಾಧ್ಯಕ್ಷರು : ಅವರು ಉತ್ತರ ಹೇಳುವುದಕ್ಕೇ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ರೆಡ್ಡಿ, ವಾಟಾಳ್‌ರವರೇ, ಇದು ಒಳ್ಳೆಯದಲ್ಲ.

ಶ್ರೀ ವಾಟಾಳ್ ನಾಗರಾಜ್ : ಸದನ ಸಮಿತಿ ನೇಮಕದ ವಿಚಾರ ಬೇರೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು) : ಜಂಟಿ ಸದನ ಸಮಿತಿಯನ್ನು ರಚನೆ ಮಾಡಿರುವುದು ಈ ಸದನ ಮತ್ತು ಮೇಲ್ಮನೆ ಸೇರಿ. ಜಂಟಿ ಸದನ ಸಮಿತಿ ಯಾವ ರೀತಿಯಾಗಿ ತನ್ನ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದನ್ನು ಆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಆ ಕೆಲಸವನ್ನು ಮಾಡುತ್ತಾರೆ. ಅದು ಅವರ ಸಂಪೂರ್ಣವಾದ ಸ್ವಾತಂತ್ರ್ಯ. ಆ ಜಂಟಿ ಸದನ ಸಮಿತಿ ಕೆಲಸ ಮಾಡುವ ಸಂದರ್ಭದಲ್ಲಿ ನಮ್ಮ ಸದಸ್ಯರ ಕಳಕಳಿ ಏನಿತ್ತು ಎಂದರೆ, ಮಧ್ಯಂತರ ವರದಿಯನ್ನು ಕೊಡಿ

ಎಂದು ಕೇಳುತ್ತಿದ್ದಾರೆ. ಬಹುಶಃ ಈಗ ನಾವು ಕೊಟ್ಟಿರುವ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ, ರಾಜ್ಯದ ಇತರೇ ಭಾಗಗಳಲ್ಲಿ ಕೂಡ ಇದೇ ತರಹ ನಷ್ಟವಾದರೆ, ಅದಕ್ಕೆ ಯಾವ ರೀತಿ ಪರಿಹಾರ ಕೊಡಬೇಕೆಂಬುದೂ ಇದೆ. ಆದರೆ, ಸಂದರ್ಭ ಬಂದಿರುವುದು, ಗುಲಬರ್ಗಾ ಮತ್ತು ಬೀದರ್‌ನಲ್ಲಿ ನಡೆದಿರುವ ಆತ್ಮಹತ್ಯೆ ಪ್ರಕರಣ, ಬೆಳೆ ಹಾನಿಯಾಗಿರುವುದರ ಬಗ್ಗೆ ಚರ್ಚೆಯಾದ ಮೇಲೆ, ಈ ಜಂಟಿ ಸದನ ಸಮಿತಿ ರಚನೆಯಾಯಿತು. ಇದಾದ ಮೇಲೆ, ಬೇರೆ ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಇದೆ ಎಂಬುವ ಪ್ರಶ್ನೆ ಬಗ್ಗೆ ನಾನು ಶ್ರೀ ಶಿವಕುಮಾರ್‌ರವರನ್ನು ಕೇಳುವುದೇನೆಂದರೆ, ಆ ಎರಡೂ ಜಿಲ್ಲೆಗಳಲ್ಲಿ ನಡೆದಿರುವ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದ ಹಾಗೆ ಮಧ್ಯಂತರ ವರದಿ ಕೇಳುತ್ತಿದ್ದಾರೆ. ನೀವು ಹೋಗಿ ನೋಡಿ ಮಾಹಿತಿ ಸಂಗ್ರಹಿಸಿ, ನಿಮ್ಮ ಸಮಿತಿ ಸದಸ್ಯರು ಮಾಡುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಪಟ್ಟಹಾಗೆ ಮಧ್ಯಂತರ ವರದಿಯನ್ನು ಈ ಸದನಕ್ಕೆ ಕೊಡಲು ನಿಮ್ಮ ಸಮಿತಿಯವರು ತೀರ್ಮಾನ ಮಾಡಿ ಕೊಟ್ಟರೆ, ಮೇ 11 ರವರೆಗೆ ನೀವು ಸಮಯ ಕೇಳಿದ್ದೀರಿ, ಅಂತಿಮ ವರದಿ ಕೊಡಲು ಮೇ 11 ಆಗಲಿ. ಆದರೆ, ಮಧ್ಯಂತರ ವರದಿ ಕೊಡಲು, ತಾವು ದಯವಿಟ್ಟು ತಮ್ಮ ಸದಸ್ಯರೊಡನೆ ಚರ್ಚಿಸಿ ಮಧ್ಯಂತರ ವರದಿ ಕೊಡಲು ಕ್ರಮ ಕೈಗೊಳ್ಳಬೇಕೆಂಬುದನ್ನು ಉಪಾಧ್ಯಕ್ಷರ ಮೂಲಕ ವಿನಂತಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ನಾವು 8ನೇ ತಾರೀಖು ಟೂರ್ ಹೋಗುವ ದಿವಸವೇ ಗುಡುವು ಮುಗಿದು ಹೋಗಿದೆ ಏನು ಮಾಡಬೇಕೆಂದು ಕಮಿಟಿಯಲ್ಲಿ ಚರ್ಚೆ ಮಾಡಿ, Extension is the only remedy ಎಂದು ಕೇಳಿಕೊಂಡಿದ್ದು ಮಾಡಲೇಬೇಕೆಂದಿದ್ದರೆ, ಮೀಟಿಂಗ್ ಮಾಡುವ ಅವಶ್ಯಕತೆಯೇ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ನಾನು ತಮ್ಮ ಗಮನಕ್ಕೆ ರೂಲ್ 230ನ್ನು ತರುತ್ತೇನೆ,

" Where the House has not fixed any time for the presentation of the report, the report shall be presented within one month of the date on which reference to the Committee was made:

Provided that the House may at any time, on a motion being made, direct that the time for the presentation of the report by the Committee be extended to a date specified in the motion." ಎಂದಿದೆ.

ಇಲ್ಲಿ ಏನಾಯಿತೆಂದರೆ, ನಾವು ಯಾವ ದಿವಸ ಜಂಟಿ ಸದನ ಸಮಿತಿ ಮಾಡಬೇಕೆಂದು ಹೇಳಿ ಕೇಳಿದಾಗ, ಅದೇ ದಿವಸ ಈ ಮಾತನ್ನು ಹೇಳಿದ್ದು. ಆಗಸ್ಟ್ 15 ರೊಳಗೆ, ಈ ವರದಿಯನ್ನು ಸದನಕ್ಕೆ ಕೊಡಬೇಕು. ಅದಕ್ಕಾಗಿಯೇ ತರಾತುರಿಯಲ್ಲಿ ಅದನ್ನು ಮಾಡಿದ್ದು. ಅದನ್ನು ಅದೇ ದಿವಸ ಪ್ರಕಟಿಸಬೇಕೆಂದು ಒತ್ತಾಯ ಮಾಡಿದ್ದು. ಅದಕ್ಕಾಗಿ ನಾವು ಟೈಂ ಫಿಕ್ಸ್ ಮಾಡದೇ ಹೋದರೆ ರೂಲ್ 230ರ ಪ್ರಕಾರ ಒಂದು ತಿಂಗಳ ಅವಧಿಯಿದೆ. ಯಾವಾಗ ನಾವು 15ರೊಳಗೆ ರಿಪೋರ್ಟ್ ಕೊಡಬೇಕೆಂದು ಸಮಯ

ನಿ ಮಾಡಿದ್ದೇವೆ, ಆಗ ಆ ಹೌಸ್ ಕಮಿಟಿಯ ರೆಸ್ಪಾನ್ಸಿಬಿಲಿಟಿಯಾಗುತ್ತದೆ. ಇದನ್ನು 15 ದಿ ದೊಳಗೆ ಕೊಡಬೇಕು. ಯಾವುದೇ ಒಂದು ಕಾರಣದಿಂದ ಕೊಡದಿದ್ದರೆ, ಟೈಂ ಎಕ್ಸ್‌ಟೆನ್ ಕೇ ಹುದು, ಅವರು ಕೇಳಿದ್ದಾರೆ. ಕನಿಷ್ಠಪಕ್ಷ ಮಧ್ಯಂತರ ವರದಿ ಕೊಡದೆ ಹೋದರೆ, ಸದನದ ಸದ ು ಹೌಸ್ ಕಮಿಟಿ ಮಾಡಬೇಕೆಂದು ಒತ್ತಾಯ ಮಾಡಿದ್ದರ ಮಹತ್ವವೇನು ಉಳಿಯುತ್ತದೆ? ನಾಷ ಕೆ ಮಾಡಬೇಕು? ಯಾವ ಉದ್ದೇಶಕ್ಕಾಗಿ ಮಾಡಬೇಕು?

ಉಪಾಧ್ಯಕ್ಷರು : ಆಗಲೇ ಸರ್ಕಾರ ಹೇಳಿದೆ. ಮಧ್ಯಂತರ ವರದಿ ಕೊಡಲು ತೊಂದರೆಯೇನಿಲ್ಲ. ಆದಷ ೀಗ ಕೊಡಿ.

ಎಂ. ಮಲ್ಲಿಕಾರ್ಜುನ ಖರ್ಗೆ : ರೆಡ್ಡಿಯವರು, ಸದನದ ಸದಸ್ಯರು ಇರದಿದ್ದರೆ....

ಗೊಂದಲ

ಉಪಾಧ್ಯಕ್ಷರು : ಸದನ ಸಮಿತಿ ಒಂದು ಬಾರಿ ಆದಮೇಲೆ, ಅವರಿಲ್ಲ, ಇವರಿಲ್ಲ ಎನ್ನುವುದು ಬೇಡ. ಒಮ್ಮ ಸಮಿತಿ ಆದಮೇಲೆ, ಆ ವಿಷಯವನ್ನೇಕೆ ಚರ್ಚಿಸಬೇಕು?

ಶ್ರೀ ಪಿ.ವಿ. ಶ್ರೀರಾಂರೆಡ್ಡಿ : ಆ ರೀತಿ ನಾನು ಹೇಳಲಿಲ್ಲ. ನಾವು ಅದರಲ್ಲಿ ಇರಬೇಕೆಂದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ನಿಮ್ಮ ಗಮನಕ್ಕೆ ತರುತ್ತೇನೆ, ನಮ್ಮ ಸರ್ಕಾರ ಇದ್ದಾಗ, ಅಂದರೆ, ಶ್ರೀ ೀವರಾಜ ಅರಸುರವರ ಕಾಲದಲ್ಲಿ ಬರಗಾಲತ ಕಾಮಗಾರಿಗಳನ್ನು ನೋಡಬೇಕು ಮತ್ತು ರ್ವೆ ಮಾಡಬೇಕೆಂದು ಹೇಳಿದಾಗ, ಶ್ರೀ ಆರ್ಮುಗಂರವರೊಬ್ಬರನ್ನೇ ಒನ್ ಮ್ಯಾನ್ ಕಮಿಷನ್ ಆಗಿ ನೆಮಕ ಮಾಡಿದ್ದುದು.

1.00 ಪಿ.ಎಂ.

ಶ್ರೀ ಪಿ. ಬಿ. ಶಿವಕುಮಾರ್ (ಕೆರಗೋಡು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಿದರು. ಮಾನ್ಯ ಮಾಧುಸ್ವಾಮಿಯವರು, ನಮಗೆ ಯಾವಾಗ ಸಮಿತಿಯ ನೋಟಿಸ್ ಬಂತೋ ಅದೇ ದಿವಸವೇ ಅದೇ ವಿಚಾರದ ಬಗ್ಗೆ ಸಭಾಧ್ಯಕ್ಷರ ಜೊತೆಯಲ್ಲಿ ಔಪಚಾರಿಕವಾಗಿ ಮಾತನಾಡಿದ್ದೇವೆ, ಅಧಿವೇಶನ ಪ್ರಾರಂಭವಾಗುವುದರೊಳಗೆ ನಾವು ಎಷ್ಟು ಕಡೆಗೆ ಹೋಗಿ ವರದಿ ಕೊಡಬೇಕು ಎಂದು ಹೇಳಿದರು, ನಂತರ ಈ ಕಾಲಾವಕಾಶವನ್ನು ವಿಸ್ತರಿಸಿಕೊಳ್ಳಲು ಪ್ರಸ್ತಾಪ ಮಾಡೋಣ, ನೀವು ಗುಲ್ಬರ್ಗಾ-ಬೀದರ್‌ಗೆ ಹೋಗಿ ಬನ್ನಿ ಎಂದು ಹೇಳಿದರೆ. ಅದರಂತೆ ನಾವು 8ನೇ ತಾರೀಖಿಗೆ ಪ್ರವಾಸ ಕಾರ್ಯಕ್ರಮ ಕೈಗೊಂಡರೆ 12ನೇ ತಾರೀಖಿನವರೆಗೆ ನಾವು ಎರಡು ಜಿಲ್ಲೆಗಳನ್ನು ಮಾತ್ರ ಪ್ರವಾಸ ಮಾಡಿರುವುದು. ಈ ಸಮಿತಿಯ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ, ಈ ರಾಜ್ಯದಲ್ಲಿ ಉಂಟಾಗಿರುವ ಬೆಳೆ ಹಾನಿಯಿಂದ ಆತ್ಮಹತ್ಯೆ ಪ್ರಕರಣಗಳ ಹಿನ್ನೆಲೆಯಲ್ಲಿ ರಚಿಸಲಾಗಿರುವ ಸಮಿತಿಯು ಮಧ್ಯಂತರ ವರದಿಯನ್ನು ಕೊಡಬೇಕೆಂದು ಮಾನ್ಯ ನಾಣಯ್ಯನವರು ಕೇಳಿದ್ದಾರೆ. ಇದಕ್ಕೆ ನನ್ನ ಒಂದು ಮಾತು ಏನೆಂದರೆ, ಈ ಸಮಿತಿಯಲ್ಲಿರುವ ಗೌರವಾನ್ವಿತ ಸದಸ್ಯರು ರೈತರ ಸಮಸ್ಯೆಯನ್ನು ಅವರು

ಮೆಚ್ಚುವ ರೀತಿಯಲ್ಲಿ ಸ್ಪಂದಿಸುವ ಭಾವನೆಯುಳ್ಳವರಾಗಿದ್ದಾರೆ. ಎಲ್ಲರೂ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಕೋರಿಕೆ ಏನೆಂದರೆ, ನೀವು ಬೀದರ್-ಗುಲ್ಬರ್ಗಾಕ್ಕೆ ಕೊಟ್ಟರೆ, ಬೆಳ್ತಂಗಡಿಯಲ್ಲಿ ಅಡಿಕೆ ಮರ ಹೋಗಿರುವುದು, ಮದುಗಿರಿಯಲ್ಲಿ ಕಡ್ಲೆಕಾಯಿ ಹೋಗಿರುವಂತಹ ರೈತರು ಏನು ಮಾಡಿದ್ದಾರೆ ಎನ್ನುವುದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶ ಬೇಡವೇ ಎನ್ನತಕ್ಕಂಥ ದೃಷ್ಟಿಯಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ, ನಾವು ಒಂದು ಪ್ರಿಲಿಮಿನರಿ ಮೀಟಿಂಗ್ ಆದರೂ ಮಾಡುವುದು ಬೇಡವೆ? ಆದ್ದರಿಂದ ಮುಂದಿನ ವಾರ ನಾವು ಮೂರು ತಂಡ ಮಾಡಿಕೊಂಡು ರಾಜ್ಯದಲ್ಲಿ ಬೆಳ ಹಾನಿಯಿಂದ ಉಂಟಾಗಿರುವ ಆತ್ಮಹತ್ಯೆ ಪ್ರಕರಣಗಳನ್ನು ನೋಡುವುದಕ್ಕೆ .....

(ಗೊಂದಲ)

ಉಪಾಧ್ಯಕ್ಷರು : ಅವರು ಹೇಳುವುದನ್ನು ಕೇಳುವುದಿಲ್ಲ, ನಾವು ಹೇಳುವುದನ್ನು ಕೇಳುವುದಿಲ್ಲವೆಂದರೆ ಹೇಗೆ? ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸದನಕ್ಕೆ ಸಂಸದೀಯ ಸಚಿವರು ಒಂದು ಬೆಳಕನ್ನು ಚೆಲ್ಲಿದ್ದಾರೆ. ತಾತ್ಕಾಲಿಕ ವರದಿ ಕೊಡಬೇಕು ಇದು ಸರ್ಕಾರದ ಉದ್ದೇಶ ಎಂದು ಅವರು ಹೇಳುತ್ತಿದ್ದಾರೆ. ....

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಎದ್ದು ನಿಂತರೆ ಹೇಗೆ? ಶಿವಕುಮಾರ್‌ರವರೆ, ಈಗಾಗಲೇ ಮಾನ್ಯ ಸಂಸದೀಯ ಸಚಿವರು, ಗುಲ್ಬರ್ಗಾ-ಬೀದರ್‌ಗೆ ಸೀಮಿತವಾಗಿ ಒಂದು ಮಧ್ಯಂತರ ವರದಿಯನ್ನು ಕೊಡಿ ಎಂದು ಹೇಳಿರುವ ಹಿನ್ನೆಲೆಯಲ್ಲಿ ತಾವು ಆದಷ್ಟು ಬೇಗ ಒಂದು ಮಧ್ಯಂತರ ವರದಿಯನ್ನು ಕೊಡಿ.

(ಗೊಂದಲ)

ಶ್ರೀ ಜಿ. ಬಿ. ಶಿವಕುಮಾರ್ : ಗುಲ್ಬರ್ಗಾ-ಬೀದರ್‌ಗೆ ಸೀಮಿತವಾಗಿ ಒಂದು ಮಧ್ಯಂತರ ವರದಿ ಬೇಕು ಎಂದು ತಮ್ಮ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಬಯಸುತ್ತೀರಾ ಅಥವಾ ಸಮಿತಿಯ ರಚನೆಯ ಸಮಯದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಏನು ಇತ್ತೋ, ಅದಕ್ಕೆ ಕಮಿಟಿ ಸ್ಟಿಕ್ ಆನ್ ಆಗಬೇಕು ಎನ್ನುವ ಒಂದು ಮಾರ್ಗಸೂಚಿಯನ್ನು ನಮಗೆ ಕೊಡಿ ....

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಎರಡನೆಯ, ಮೂರನೆಯ ಮಧ್ಯಂತರ ವರದಿ ಕೊಡಿ, ಆದರೆ ಪ್ರತ್ಯೇಕವಾಗಿ ಬೀದರ್-ಗುಲ್ಬರ್ಗಾದಲ್ಲಿ ಬೆಳೆಹಾನಿಯಿಂದ ಉಂಟಾಗಿರುವ ಆತ್ಮಹತ್ಯೆ ಪ್ರಕರಣ ಏನು ಇವೆ, ಇದಕ್ಕೋಸ್ಕರ ತಾವು ವರದಿ ಕೊಡಿ ಎಂದು ಕೇಳುತ್ತಿರುವುದು ...

(ಗೊಂದಲ)

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದರೂರು : ಕೇವಲ ಬೀದರ್-ಗುಲ್ಬರ್ಗಾದಲ್ಲಿ ಬೆಳೆ ಹಾನಿಗೆ ಸಂಬಂಧಪಟ್ಟಂತೆ ಈ ಸದನ ಸಮಿತಿ ರಚನೆ ಆಗಲಿಲ್ಲ. ರಾಜ್ಯದ ವಿವಿಧಭಾಗಗಳಲ್ಲಿ ಹಾಗೂ ನನ್ನ ಕ್ಷೇತ್ರಗಳಲ್ಲೂ ಕೂಡ ಬೆಳೆ ಹಾನಿಯಿಂದ ಸಾವಿಗೀಡಾಗಿರುವುದರಿಂದ ಈ ಸದನ ಸಮಿತಿಯನ್ನು ರಚನೆ ಮಾಡಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುತ್ತಿರುವುದು ಬೇರೆ, ಬೆಳೆ ಹಾನಿಯ ಬಗ್ಗೆ ವಿಚಾರವೇ ಬೇರೆ ... ಇದಕ್ಕೆ ನನ್ನ ವಿರೋಧ ಇಲ್ಲ..

ಉಪಾಧ್ಯಕ್ಷರು : ಅವರು ಮಾತನಾಡಲಿ, ಅವರು ಸದಸ್ಯರು ಹೌದೋ ಅಲ್ಲವೋ? ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಮಾತನಾಡುವಾಗ ನೀವು ಮಾತನಾಡುವುದು, ನೀವು ಮಾತನಾಡುವಾಗ ಅವರು ಮಾತನಾಡುವುದು ಮಾಡಿದರೆ ಹೇಗೆ? ...

(ಗೊಂದಲ)

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದರೂರು : ಶೂನ್ಯವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಷಯಕ್ಕೆ ಸಭಾಧ್ಯಕ್ಷರು, ಇದಕ್ಕೆ ಒಂದು ಜಂಟಿ ಸದನ ಸಮಿತಿ ಮಾಡೋಣ, ಆ ಸಮಿತಿ ಇಡೀ ರಾಜ್ಯದಲ್ಲಿ ಬೆಳೆ ಹಾನಿಯಿಂದ ಉಂಟಾದ ಸಾವಿನ ಬಗ್ಗೆ ತನಿಖೆ ಮಾಡಬೇಕು ಎಂದು ತೀರ್ಮಾನ ಮಾಡಿ ಇದನ್ನು ರಚನೆ ಮಾಡಿದರು. ಆದ್ದರಿಂದ ಇದು ಬೀದರ್-ಗುಲ್ಬರ್ಗಕ್ಕೆ ಮಾತ್ರ ಸೀಮಿತವಲ್ಲವೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ್ : ಬೀದರ್-ಗುಲ್ಬರ್ಗ ಜಿಲ್ಲೆಗಳಲ್ಲಿ ಎಲ್ಲಾ ಸದಸ್ಯರು ಹೋಗಿ ನಾವು ವಿಸಿಟ್ ಮಾಡಿಕೊಂಡು ಬಂದೆವು, ವಿಸಿಟ್ ಮುಗಿಸಿಕೊಂಡು ಬರುವುದಕ್ಕಿಂತ ಮುಂಚೆ ನಮ್ಮ ಅವಧಿ ಮುಕ್ತಾಯವಾಗುತ್ತಿತ್ತು. ಎರಡು ಜಿಲ್ಲೆಗಳಲ್ಲಿ ಸಂಬಂಧಪಟ್ಟಂತೆ ನಾವು ಪೂರ್ವಭಾವಿಯಾಗಿ ಎಲ್ಲಾ ಸದಸ್ಯರು ಒಂದು ಮೀಟಿಂಗ್ ಸೇರಿ ಯಾವ ರೀತಿ ನಾವು ಪರಿಹಾರವನ್ನು ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆಯ ಮೂಲಕ ನಾವು ಇನ್ನೂ ಮಾಡಿಲ್ಲ. ಇದಕ್ಕಾಗಿ ನಮಗೆ ಕೆಲವು ದಿವಸಗಳ ಕಾಲಾವಕಾಶ ಕೊಟ್ಟರೆ, ನಾವು ಮೀಟಿಂಗ್ ಮಾಡಿ ಮಧ್ಯಂತರ ವರದಿಯನ್ನು ಸಲ್ಲಿಸುತ್ತೇವೆ. ಸಮಿತಿಯ ಅಧ್ಯಕ್ಷರು ಹೇಳುವ ತಾತ್ಪರ್ಯ ಏನೆಂದರೆ, ಇತರೆ ವಿಷಯಕ್ಕೆ ಉಳಿದ ಜಿಲ್ಲೆಗಳಲ್ಲಿ ಉಂಟಾಗಿರುವ ಹಾನಿಯನ್ನು ಯಾವ ರೀತಿ ನೀವು ವಿಸಿಟ್ ಮಾಡಿ ಇದರ ಬಗ್ಗೆ ವರದಿ ಸಲ್ಲಿಸಬೇಕು ಎನ್ನುವ ವಿಚಾರಕ್ಕೆ ಸ್ವಲ್ಪ ಕಾಲಾವಕಾಶ ಬೇಕು ....

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, "ಇದು ತಾಂತ್ರಿಕ ತೊಂದರೆಯಲ್ಲ." ಇದು ಮಾನವೀಯತೆಯ ಪ್ರಶ್ನೆ. ಪ್ರೋಸೀಜರ್ ಪ್ರಾಬ್ಲಮ್ ಅಲ್ಲ. ಮನುಷ್ಯತ್ವ ಇಟ್ಟುಕೊಂಡು ವ್ಯವಹಾರ ಮಾಡತಕ್ಕಂಥ ವಿಚಾರ ಇದು. ಗುಲಬರ್ಗ-ಬೀದರ್ ಭಾಗದಲ್ಲಿ

ಆತ್ಮಹತ್ಯೆ ನಡೆದಿರುವುದರಿಂದ ಇಷ್ಟು ಪ್ರಕಾರವಾಗಿ ಚರ್ಚೆಯಾಯಿತು. ಈಗ ಮಧ್ಯಂತರ ವರದಿಯನ್ನು ನೀವು ಹತ್ತು ಕೊಡಿ, ಕೊಡಬಾರದೂ ಎಂದೇನೂ ಇಲ್ಲ. ಸೀಮಿತವಾಗಿ ಕೊಡಿ. ಏಕೆಂದರೆ ಈ ಸಭೆಯಲ್ಲಿ ಈ ವಿಚಾರದ ಬಗ್ಗೆ ಬಹಳ ಪ್ರಾಮುಖ್ಯತೆ ಕೊಟ್ಟು ಚರ್ಚೆ ಮಾಡಿದ್ದೇವೆ. ಇದು ಉಳಿಯಬೇಕಾದರೆ ನೀವು ಎಲ್ಲವನ್ನೂ ಸೇರಿಸಿ ಡೈಲ್ಯೂಟ್ ಮಾಡಿದರೆ ಚೆನ್ನಾಗಿರುವುದಿಲ್ಲ, ನಮಗೆ ಕೂಡ ಅಷ್ಟು ಶೋಭೆ ತರುವಂಥದ್ದಲ್ಲ. ಆದ್ದರಿಂದ, ದಯವಿಟ್ಟು ಮಾನವೀಯತೆಯ ದೃಷ್ಟಿಯಿಂದ ಮಧ್ಯಂತರ ವರದಿಯನ್ನು ಕೊಡಿ.

ಉಪಾಧ್ಯಕ್ಷರು : ಶಿವಕುಮಾರ್‌ರವರೆ, ಮಾನ್ಯ ಸದಸ್ಯರು ಹೇಳುವ ಪ್ರಕಾರ ಆದಷ್ಟು ಬೇಗ ಮಧ್ಯಂತರ ವರದಿಯನ್ನು ಕೊಡಿ...

ಶ್ರೀ ಎಸ್. ಸುರೇಶ್ ಕುಮಾರ್ : ಈ ಸಮಿತಿ ಕೆಲಸ ಮಾಡುವ ರೀತಿಯಲ್ಲಿ ಫೈರ್ ಬ್ರಿಗೇಡ್ ಮಾಡಿ ಬಿಟ್ಟರೆ, ಎಲ್ಲಾ ಕಡೆ ಬೆಂಕಿ ಹತ್ತಿದ ನಂತರ ನಾವು ಆರಿಸುತ್ತೇವೆಂದರೆ. ಇಟ್ ಈಸ್ ಫೈರ್ ಬ್ರಿಗೇಡ್ ... ತಕ್ಷಣ ಹೋಗಬೇಕು, ಬೆಂಕಿ ಆರಿಸಬೇಕು. ಅಂತಿಮ ವರದಿ ಆಮೇಲೆ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಹಠ ಮಾಡುವುದನ್ನು ನೋಡಿದರೆ ನಮಗೆ ಬಹಳ ನೋವಾಗುತ್ತದೆ. ನಾಳೆ ಅಥವಾ ನಾಡಿದ್ದು ನಮಗೆ ಒಂದು ಮಧ್ಯಂತರ ವರದಿ ಕೊಡಿ...

ಶ್ರೀ ಎಂ. ಸಿ. ನಾಣಯ್ಯ : ಸಮಿತಿ ಮಾಡುವ ಕೆಲಸ, ಕಾರ್ಯಕ್ರಮಗಳ ಬಗ್ಗೆ ನಾವು ಇಲ್ಲಿ ಯಾವುದೇ ರೀತಿಯ ಮಾತುಗಳನ್ನು ಆಡಬಾರದು. ಅವರಿಗೂ ಕೂಡ ಜವಾಬ್ದಾರಿ ಇದೆ, ಈ ಜವಾಬ್ದಾರಿಯಿಂದಲೇ ಅವರು ಕೆಲಸ ಮಾಡುತ್ತಿದ್ದಾರೆ. ಒಂದು ವಿಚಾರ ಏನೆಂದರೆ, ಗುಲ್ಬರ್ಗಾ-ಬೀದರ್‌ಗೆ ಸೀಮಿತವಾಗಿ ಚರ್ಚೆ ನಡೆಸಿ, ಅಲ್ಲಿಂದ ಸಮಿತಿ ರಚನೆಯಾದನಂತರ, ಇತರೇ ಭಾಗಗಳಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ವರದಿ ಕೊಡಿ ಎಂದು ಕೇಳಿದ್ದೇವೆ. ಅವರು ಅಂತಿಮವರದಿಗೆ ಮೇ -11 ರವರೆಗೆ ನಮಗೆ ಕಾಲಾವಕಾಶ ಕೊಡಿ ಎಂದು ಕೇಳಿದ್ದಾರೆ. ಅವರು ಕೇಳಿರುವ ಕಾಲಾವಕಾಶವನ್ನು ಕೊಡೋಣ. ಈ ಮಧ್ಯಂತರ ವರದಿಯನ್ನು ಕೊಡುವುದಕ್ಕೆ ಅವರು ಎಲ್ಲರೂ ಸೇರಿ ಪೂರ್ವಭಾವಿಯಾಗಿ ಚರ್ಚೆ ಮಾಡಬೇಕಾಗುತ್ತದೆ. ಬೀದರ್-ಗಲ್ಬರ್ಗಾಕ್ಕೆ ಸಂಬಂಧಪಟ್ಟಂತೆ ನೋಡಿರತಕ್ಕಂಥ ವಿಚಾರ ಈಗಾಗಲೇ ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸದನದ ಮುಂದೆ ನೀವು ತಾತ್ಕಾಲಿಕ ವರದಿಯನ್ನು ಇಡಲೇಬೇಕು. ನಿಮ್ಮ ವಾದವನ್ನು ನಾನು ಒಪ್ಪುವುದಿಲ್ಲ, ಇದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತೇನೆ.

(ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಈ ಸದನ ರಚನೆ ಮಾಡಿರುವ ಸಮಿತಿ ಸಂಪೂರ್ಣ ಸ್ವತಂತ್ರವಾಗಿದ್ದು, ಅದರ ಕಾರ್ಯಕಲಾಪಗಳ ಬಗ್ಗೆ ನಾವು ಮಾರ್ಗಸೂಚಿಗಳನ್ನು ಕೊಟ್ಟಿದ್ದೇವೆ. ಅವರು ಕಾಲಾವಕಾಶ

ಕೇಳಿರುವುದರಿಂದ ನಾವು ಅವರಿಗೆ ಸಮಯ ಕೊಡೋಣ, ಬಹುಶಃ ಇವರು ಇದರೊಳಗಡೆ ಪೂರ್ವಭಾವಿ ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಾರೆ. ಒಂದು ವಾರದಲ್ಲಿ ಆ ಸಭೆಯನ್ನು ಕರೆದು ಮಧ್ಯಂತರ ವರದಿಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಅವರು ಈ ಕೆಲಸವನ್ನು ಮಾಡುತ್ತಾರೆ ....

ಉಪಾಧ್ಯಕ್ಷರು : ಆಯಿತು, ಅವರು ಈಗ ಒಪ್ಪಿಕೊಂಡಿದ್ದಾರೆ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಈ ನಿಲುವಳಿ ಸೂಚನೆ ತಂದಿದ್ದು ಬಹುಶಃ ತಮಗೆಲ್ಲಾ ಗೊತ್ತಿರಬಹುದು. ಬೀದರ್-ಗುಲಬರ್ಗಾದ ಕೆಲವು ಭಾಗಗಳಲ್ಲಿ ಬೆಳೆ ಹಾನಿಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಾಗ ಸಾಕಷ್ಟು ಚರ್ಚೆಯಾಯಿತು. ನಂತರ ಇದಕ್ಕೆ ಅವರು ಒಂದು ಪರಿಹಾರ ಕೊಡುತ್ತೇವೆ ಎನ್ನುವ ಉತ್ತರ ಕೊಟ್ಟರು. ಇದಕ್ಕೆ ನಾವು ಅಸಮಾಧಾನ ವ್ಯಕ್ತಪಡಿಸಿ, ದೀರ್ಘವಾಗಿ ಚರ್ಚೆ ಮಾಡಬೇಕು ಎಂದು ಪುನಃ ಇದನ್ನು ಕಳುಹಿಸಿದೆವು. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಇಲ್ಲಿ ಬಂದು, ನಾವು ಹೇಳುವುದಕ್ಕಿಂತ ಮುಂಚೇನೆ, ಸುವೋಮೋಟೊ "ಹೌಸ್ ಕಮಿಟಿ ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಅನೌನ್ಸ್ ಮಾಡಿದರು" ಇದರ ಆಧಾರದ ಮೇಲೆ ಈ ಸಮಿತಿ ರಚನೆಯಾಗಿದ್ದು. ಮೊದಲು ಇದು ಯಾವ ಹಿನ್ನೆಲೆಯಲ್ಲಿ ರಚನೆಯಾಗಿದೆ ಎನ್ನುವುದು ನೋಡಿಕೊಳ್ಳಬೇಕಾಗುತ್ತದೆ. ಅದು ಬಿಟ್ಟು ಸುಮ್ಮನೆ ಒಬ್ಬರ ಮೇಲೆ ಒಬ್ಬರು ಎತ್ತಿಕಟ್ಟಿ ಹೇಳಿದರೆ ಬಹಳ ಕಷ್ಟವಾಗುತ್ತದೆ. ಶಿವಮೊಗ್ಗ, ಬೆಳಗಾವಿ, ರಾಯಚೂರಿನಲ್ಲಿ ಬೆಳೆ ಹಾನಿಯಾಗಿಲ್ಲವೆಂದರೆ ಏನರ್ಥ? ಎಲ್ಲಾ ಕಡೆ ಬೆಳೆ ಹಾನಿಯಾಗಿದೆ, ಏನು ಪರಿಹಾರ ಕೊಡಬೇಕು ಎನ್ನುವುದರ ಬಗ್ಗೆ ನಿಮ್ಮ ಅಂತಿಮ ವರದಿಯನ್ನು ಕೊಡಿ. ಬೆಳೆಹಾನಿಯಿಂದಾಗಿ ಸಾವೀಗಿಡಾಗಿರುವ ಪ್ರಕರಣಗಳು ಬೆಳಗಾವಿ, ಚಿಕ್ಕಮಗಳೂರು, ಮಂಡ್ಯದಲ್ಲಿರಬಹುದು. ಇವು ಎಲ್ಲಾ ಒಂದೇ ಆದ್ದರಿಂದ ನಮಗೆ ಅದಕ್ಕೆ ಬೇರೆ ವರದಿ ಕೊಡಿ. ಅದನ್ನು ಎಲ್ಲಾ ಮಿಕ್ಸ್ ಮಾಡಿ ಕೊಟ್ಟರೆ ಸುಮ್ಮನೆ ತೊಂದರೆಯಾಗುತ್ತದೆ. ನೀವು ಸಮಿತಿಯವರು ಕೆಲಸ ಮಾಡುತ್ತಿಲ್ಲವೆಂದು ನಾವು ಆಪಾದನೆ ಮಾಡುತ್ತಿಲ್ಲ. ನಮ್ಮ ಕಳಕಳಿ ಇಷ್ಟೇ;15 ದಿವಸದಲ್ಲಿ ಕೊಡಬೇಕು ಎಂದು ಕಾಲ ನಿಗದಿ ಮಾಡಿದ್ದೇವೆ. ಅದರಂತೆ ಕೊಟ್ಟು ಬಿಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ರೂಲ್ 230ರ ಪ್ರಕಾರ ಒಂದು ತಿಂಗಳು ಟೈಮ್ ತಮಗಿರುತ್ತದೆ.

ಉಪಾಧ್ಯಕ್ಷರು : ಸಮಿತಿ ರಚನೆಗೊಂಡ ದಿನಾಂಕದಿಂದ 15 ದಿವಸದೊಳಗಾಗಿ ವರದಿಯನ್ನು ಸಲ್ಲಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ನಾವು ಕಳಕಳಿಯಿಂದ ಕೇಳುವುದೇನೆಂದರೆ, 15 ದಿವಸದಲ್ಲಿ ವರದಿಯನ್ನು ಕೊಡಬೇಕೆಂದು ಸದನ ಒಪ್ಪಿದೆ. ಆದ್ದರಿಂದ ಈ ಸದನಕ್ಕೆ ಗೌರವ ಕೊಡುವುದಕ್ಕೋಸ್ಕರ ಮಧ್ಯಂತರ ವರದಿಯನ್ನು ಕೊಡಲಿ. ಈಗ ರೂಲ್ 230 ಸಬ್‌ಕ್ಲಾಸ್ 2 ರಲ್ಲಿ "Reports may be either preliminary or final."ಎರಡನ್ನು ಕೊಡಬಹುದು ಮತ್ತು ರೂಲ್ 229 ಪ್ರಕಾರ ಸ್ಪೆಷಲ್ ರಿಪೋರ್ಟ್‌ನ್ನು ಸಹ ಕೊಡಬಹುದು.

"A Committee may, if it thinks fit, make a special report on any matter that arises or comes to light in the course of its work which it may consider necessary to bring to the notice of the Speaker or the House notwithstanding that such matter is not directly connected with or does not fall within or is not incidental to, its terms of reference."

ಅಂದರೆ ಸ್ಪೆಷಲ್ ರಿಪೋರ್ಟ್ ಮತ್ತು ಪ್ರಿಲಿಮಿನರಿ ರಿಪೋರ್ಟ್ ಕೊಡುವುದಕ್ಕೆ ಅವಕಾಶ ಇದೆ. ನಿಮ್ಮಲ್ಲಿ ಅಂಕಿಅಂಶಗಳು ಇಲ್ಲದಿದ್ದರೆ ಎಲ್ಲಾ ಕಡೆ ಹೋಗಿ ನಂತರ ಫೈನಲ್ ರಿಪೋರ್ಟ್ ಕೊಡುವುದಕ್ಕೂ ಅವಕಾಶ ಇದೆ. ಇದಕ್ಕೆ ನಮ್ಮ ಕಳಕಳಿ ಏನೆಂದರೆ, ಟೈಂ ಲಿಮಿಟ್ 15 ದಿವಸ ಫಿಕ್ಸ್ ಮಾಡಿದ ಮೇಲೆ ಕನಿಷ್ಠಪಕ್ಷ ನೀವು ಪ್ರಿಲಿಮಿನರಿ ರಿಪೋರ್ಟನ್ನು ಇವತ್ತು ಕೊಟ್ಟರೆ, ಯಾವ ಜನ ಇವತ್ತು ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾರೆ ಅಂಥ ಕೆಲವು ಜಿನಿಯನ್ ಕೇಸ್‌ಗಳಿಗೆ ಸಹಾಯ ಮಾಡಿದಂತೆ ಆಗುತ್ತದೆ. ನೀವು 11ನೇ ಮೇ 1998ರ ವರೆಗೆ ಸಮಯ ತೆಗೆದುಕೊಂಡರೆ ಆಗುವುದಿಲ್ಲ, ಏಕೆಂದರೆ ಇದು ಪುನಃ ಚರ್ಚೆ ಆಗಬೇಕು, ಆ ಸಂದರ್ಭದಲ್ಲಿ ಇದನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಅದಕ್ಕಾಗಿ ಇವತ್ತು ನಾನು ಹೌಸ್ ಕಮಿಟಿಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಹೌಸ್ ಕಮಿಟಿ ಸರ್ಕಾರದಲ್ಲ, ಇದು ಇಡೀ ಸದನದ ಕಮಿಟಿ. ಮತ್ತು ತಾವು ರಚಿಸಿದಂಥ ಕಮಿಟಿ. ಅದಕ್ಕಾಗಿ ನಾವೆಲ್ಲರೂ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಇವತ್ತು ಪ್ರಿಲಿಮಿನರಿ ರಿಪೋರ್ಟನ್ನು ಕೊಡಲಿ. ಸದನ ಸೇರಿರುವಾಗಲೂ ಸಮಿತಿಯು ಸಭೆ ಸೇರುವುದಕ್ಕೆ ಅವಕಾಶ ಇದೆ, ಆದ್ದರಿಂದ ಇನ್ನು ಎರಡು, ಮೂರು ದಿವಸದಲ್ಲಿ ಇದನ್ನು ಫೈನಲ್ ಮಾಡಬೇಕು, ಇಲ್ಲದಿದ್ದರೆ ನಮಗೆ ಪುನಃ ಚರ್ಚೆಗಾದರೂ ಅವಕಾಶ ಮಾಡಿಕೊಡಿ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಬೆಳೆ ಹಾನಿಯಿಂದ ಕೆಲವು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ವಿಚಾರ ಸರ್ಕಾರಕ್ಕೆ ಬಂದಿದೆ. ಮಾನ್ಯ ನಂಜೇಗೌಡರು ಹೇಳಿದಂತೆ, ಮಾನವೀಯತೆ ದೃಷ್ಟಿಯಿಂದ ನಾವೇನು ಕ್ರಮ ತೆಗೆದುಕೊಳ್ಳಬೇಕು ಅದನ್ನೆಲ್ಲಾ ಸರ್ಕಾರ ಬಹಳ ಪ್ರಾಮಾಣಿಕವಾಗಿ ತೆಗೆದುಕೊಂಡಿದೆ. ಮಾನ್ಯ ಮುಖ್ಯಮಂತ್ರಿಯವರು, ನಿಜವಾಗಿ ಯಾರು ಬೆಳೆ ಹಾನಿಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅಂಥವರಿಗೆ ಸರ್ಕಾರ ಪರಿಹಾರಧನ ಕೊಡುತ್ತದೆಂದು ಹೇಳಿದ ಮೇರೆಗೆ, ನಾನೇ ಖುದ್ದಾಗಿ ಮುರ್ನಾಲ್ಕು ಹಳ್ಳಿಗಳಿಗೆ ಭೇಟಿ ಕೊಟ್ಟು, ಎಲ್ಲಿ ನಿಜವಾಗಿ ಈ ಕಾರಣದಿಂದ ಸತ್ತಿದ್ದಾರೆ ಮತ್ತು ಜಿಲ್ಲಾಧಿಕಾರಿಗಳಿಂದ ಏನು ವರದಿ ಬಂದಿದೆ, ಇದರ ಮೇಲೆ ಸತ್ಯಾಂಶವನ್ನು ತಿಳಿದು, ದಿನಾಂಕ 5ನೇ ತಾರೀಖು ನೇರವಾಗಿ ಆ ಗ್ರಾಮಗಳಿಗೆ ಹೋಗಿ ಒಂದು ಲಕ್ಷ ರೂಪಾಯಿ ಪರಿಹಾರಧನವನ್ನು ಮೂರ್ನಾಲ್ಕು ಕೇಸ್‌ಗಳಲ್ಲಿ ನಾವು ವಿತರಣೆ ಮಾಡಿದ್ದೇವೆ. ನಾವು ಹೋಗಿ ಬಂದಮೇಲೆ, ಸದನ ಸಮಿತಿ ರಚನೆಯಾಗಿ ಇದರ ಅಧ್ಯಕ್ಷರು ಮತ್ತು ಸದಸ್ಯರೆಲ್ಲರೂ ಹೋಗಿ ಬಂದಿದ್ದಾರೆ. ಅವರು ಈಗ ಏನು ವರದಿ ಕೊಡುತ್ತಾರೆ ಎಂಬುದನ್ನು ನಾವು ಈಗಾಗಲೇ ಊಹೆ ಮಾಡುವುದಕ್ಕೆ ಆಗುವುದಿಲ್ಲ. ಈ ವರದಿಯನ್ನು 15 ದಿನಗೊಳಗಾಗಿ

ಕೊಡಬೇಕೆಂದು ಸದನ ತೀರ್ಮಾನ ಮಾಡಿತ್ತು. ಈಗ ಮಧ್ಯಂತರ ವರದಿಯನ್ನು ನಮ್ಮ ಕಾನೂನು ಮಂತ್ರಿಗಳು ಹೇಳಿದ್ದಾರೆ. ಸದನ ಸಮಿತಿಯರ ಅಧ್ಯಕ್ಷರು ಇನ್ನೊಂದು ಮೀಟಿಂಗ್ ಮಾಡಬೇಕೆಂದು ಹೇಳಿದ್ದಾರೆ, ಇನ್ನು ಎರಡು, ಮೂರು ದಿವಸದಲ್ಲಿ ಅವರು ರಿಪೋರ್ಟ್ ಕೊಡುತ್ತಾರೆ. ಆದ್ದರಿಂದ ಅವರಿಗೆ ಇನ್ನೊಂದು ಮೀಟಿಂಗ್ ಮಾಡಲು ಅವಕಾಶ ಕೊಡೋಣ. ಸರ್ಕಾರ ಈಗಾಗಲೇ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳುತ್ತಿದೆ. ನಿಜವಾಗಿ ಯಾರ್ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ರೈತರು ಯಾವುದರಿಂದ ಸತ್ತಿದ್ದಾರೆ ಮತ್ತು ನಿಜವಾದ ಕಾರಣಗಳೇನು ಎಂಬುದರ ಬಗ್ಗೆ ಚರ್ಚೆ ಬಂದಾಗ ಸರ್ಕಾರ ಅದಕ್ಕೆ ಉತ್ತರ ಕೊಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರಿಗೆ ಮೂರ್ನಾಲ್ಕು ದಿವಸ ಅವಕಾಶ ಕೊಡಿ, ಅಷ್ಟರಲ್ಲಿ ಅವರು ವರದಿ ಕೊಡುತ್ತಾರೆ. ನಂತರ ಅದರ ಮೇಲೆ ಚರ್ಚೆ ಮಾಡೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ರಿಪೋರ್ಟನ್ನು ಮೂರ್ನಾಲ್ಕು ದಿವಸದಲ್ಲಿ ಕೊಡಿ, ಇವತ್ತೇ ಕೊಡಿ ಎಂದು ನಾವೇನು ಕೇಳುತ್ತಿಲ್ಲ.

ಶ್ರೀ ಜಿ. ಬಿ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ಸದನ ಪ್ರಾರಂಭವಾದ ತಕ್ಷಣ ನಾನು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ಕಾಗೋಡ್ ತಿಮ್ಮಪ್ಪನವರನ್ನು ಮತ್ತು ಮಾನ್ಯ ಡಿ. ಆರ್. ಪಾಟೀಲ್‌ರವರನ್ನು ಹಾಗೂ ಮಾನ್ಯ ಪುಟ್ಟಣ್ಣಯ್ಯನವರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಿದ್ದೇನೆ. ನಿಮ್ಮನ್ನೆಲ್ಲಾ ಒಪ್ಪಿಸಲಿಕ್ಕೆ ಹೇಳುವಂತಹ ಮಾತಲ್ಲ, ವಿಧಾನ ಪರಿಷತ್ತು ಸೋಮವಾರದಿಂದ ಪ್ರಾರಂಭವಾಗುತ್ತದೆ, ಆದ್ದರಿಂದ ಸೋಮವಾರ ಸಾಯಂಕಾಲ ಸಭೆ ಸೇರಿ ಚರ್ಚೆ ಮಾಡಿದ ನಂತರ ಕೊಡೋಣವೆಂದು ಶ್ರೀಮಾನ್ ಕಾಗೋಡ್ ತಿಮ್ಮಪ್ಪನವರು ಹೇಳಿದರು. ನಾನು ಆಗ ಅವರಿಗೆ ಏನು ಹೇಳಿದೆ ಎಂದರೆ ಎಲ್ಲರೂ ಈ ಎರಡು ಜಿಲ್ಲೆಗೆ ಸೀಮಿತಿವಾಗಿದೆ ಎಂದು ನಿರೀಕ್ಷೆ ಮಾಡುತ್ತಿದ್ದಾರೆ, ಆದ್ದರಿಂದ ಮೊದಲು ಎಫ್‌ಐಆರ್ ಎಂದು ಕೊಡೋಣ ನಂತರ (ಬಿ) ರಿಪೋರ್ಟ್ ಕೊಟ್ಟು, ಆಮೇಲೆ ಚಾರ್ಜ್‌ಶೀಟ್ ಫೈಲ್ ಮಾಡೋಣ ಎಂಬ ರೀತಿಯಲ್ಲಿ ಹೇಳಿದೆ. ಏಕೆಂದರೆ ಇಡೀ ರಾಜ್ಯಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಫಿಕ್ಸ್ ಮಾಡಿರುವಾಗ ....

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : (ಬಿ) ರಿಪೋರ್ಟ್ ಕೊಡುವುದಕ್ಕೆ ಇದೇನು ಪೊಲೀಸ್ ಸ್ಟೇಷನ್ ಎಂದು ತಿಳಿದುಕೊಂಡಿದ್ದಾರೆಯೆ?

ಶ್ರೀ ಎಸ್. ಸುರೇಶ್ ಕುಮಾರ್ : 'ಬಿ' ರಿಪೋರ್ಟನ್ನು ಕೊಡುವುದು ಬೇಡ.

ಶ್ರೀ ಜಿ. ಬಿ. ಶಿವಕುಮಾರ್ : 'ಬಿ' ರಿಪೋರ್ಟ್ ಎಂದರೆ ನನ್ನ ದೃಷ್ಟಿಯಿಂದ ಅದು ಫೈನಲ್ ರಿಪೋರ್ಟ್. ಸೋಮವಾರ ಮತ್ತು ಮಂಗಳವಾರ ಸಭೆ ಸೇರಿ ಮುಂದಿನ ವಾರ ರಿಪೋರ್ಟ್ ಕೊಡೋಣ ಎಂಬ ಅಭಿಪ್ರಾಯವನ್ನು ಮಾನ್ಯ ಹಿರಿಯ ಸದಸ್ಯರೆಲ್ಲರೂ ಹೇಳಿದರು. ಇವತ್ತು ಮಾನ್ಯ ಸದಸ್ಯರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ, ಅದಕ್ಕೆ ನಮ್ಮ ಸಂಪೂರ್ಣ ಗೌರವ ಇದೆ, ಮುಂದಿನ ವಾರ ಮಾನ್ಯ ಸದಸ್ಯರೆಲ್ಲರೂ ಸೇರಿ ಮಧ್ಯಂತರ ವರದಿಯನ್ನು ಬಹುಶಃ 23ನೇ ತಾರೀಖು, ಈ ಎರಡು

ಜಿಲ್ಲೆಗೆ ಸೀಮಿತವಾದಂಥದ್ದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವಧಿ ವಿಸ್ತರಣೆ ಮಾಡುವುದರ ಜೊತೆಗೆ, ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ತಾವು ಬೇರೆ ಜಿಲ್ಲೆಗಳಿಗೆ ಕೂಡ ಬೇರೆ ಬೇರೆ ಗ್ರೂಪ್ ಮಾಡಿಕೊಂಡು ಹೋಗಿಬರುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ ಪೂರ್ತಿ ಮಾಹಿತಿಯನ್ನು ಪಡೆದುಕೊಳ್ಳದೆ ರಿಪೋರ್ಟ್ ಕೊಡುವುದಕ್ಕೆ ಆಗುವುದಿಲ್ಲ. ಈ ತಿಂಗಳ 23ನೇ ತಾರೀಖು ನಾವು ಮಧ್ಯಂತರ ವರದಿಯನ್ನು ಕೊಡುತ್ತೇವೆ.

ಉಪಾಧ್ಯಕ್ಷರು : ಈಗ ರಾಜ್ಯದಾದ್ಯಂತ ಬೆಳೆಗಳು ನಾಶವಾಗಿ, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾದ ಜಂಟಿ ಸದನ ಸಮಿತಿಯ ವರದಿಯನ್ನು ಒಪ್ಪಿಸಲು 11ನೇ ಮೇ 1998ರವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ ಮತ್ತು ಮಧ್ಯಂತರ ವರದಿಯನ್ನು 23ನೇ ತಾರೀಖಿನೊಳಗಾಗಿ ಸಲ್ಲಿಸತಕ್ಕದ್ದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು) (ಶ್ರೀ ಹೆಚ್. ನಾಗಪ್ಪ, ಕೃಷಿ ಮಾರುಕಟ್ಟೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಭಾರತ ಸಂವಿಧಾನದ 213(2)ನೇ ಅನುಚ್ಛೇದದ ಮೇರೆಗೆ 1998ರ ಕರ್ನಾಟಕ ಕೃಷಿ ಮಾರುಕಟ್ಟೆ ನಿಯಂತ್ರಣ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 31-3-1998ರಲ್ಲಿ ಹೊರಡಿಸಲಾದ 17, ಶಾಸನ 98ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾರ್ಯಕಲಾಪಗಳ ಪಟ್ಟಿಯಲ್ಲಿ ಅಲ್ಪಾಕಾಲಾವಧಿ ಚರ್ಚೆಯನ್ನು ಕೊನೆಯಲ್ಲಿ ಹಾಕಿದ್ದೀರಿ, ಇದರಲ್ಲಿ ಕಾವೇರಿ ಜಲ ವಿವಾದ ಕುರಿತಂತೆ ಬಹಳ ಮಹತ್ವ ಇರುವುದರಿಂದ ಇದನ್ನು ಮೊದಲು ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ಮೊದಲು ಬೇಡಿಕೆಗಳ ಮೇಲೆ ಚರ್ಚೆ ಆಗಲಿ. ನೆನ್ನೆ ದಿವಸ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಆದ್ದರಿಂದ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ನೋಟೀಸನ್ನು ಕೊಟ್ಟಿದ್ದೇನೆ. ಕಾವೇರಿ ಜಲ ವಿವಾದ ಕುರಿತಂತೆ ಕರ್ನಾಟಕದೊಂದಿಗೆ ಇನ್ನು ಮುಂದೆ ಯಾವುದೇ ರೀತಿಯ ಮಾತುಕತೆ ನಡೆಸುವುದಿಲ್ಲವೆಂಬ ತಮಿಳುನಾಡು ಮುಖ್ಯಮಂತ್ರಿಯವರ ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚೆ ನಡೆಸುವುದು ವಿಶದ. ವಿವರವಾದ ಚರ್ಚೆಗೆ ನಾಳೆ ಪ್ರತ್ಯೇಕ ಕಾಲದಲ್ಲಿ ನಿಗದಿ ಪಡಿಸುವುದಾಗಿ ತಾವು ಆಶ್ವಾಸನೆಯನ್ನು ನೀಡಿದ್ದೀರಿ. ಅದರಂತೆ ತಾವು ಈ ವಿಷಯದ ಬಗ್ಗೆ ಪ್ರತ್ಯೇಕ ಚರ್ಚೆಗೆ ನಾಳೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ ಎಂದು ಪತ್ರವನ್ನು ಬರೆದು ಕೊಟ್ಟಿದ್ದೇನೆ.